# ಸಹಾಯಕ್ಕಾಗಿ ಕರೆ

*ಸಂಗ್ರಹ : ಸುನಯನ ವಾಲ್ಟರ್ಸ್*

**ಜ್ಯಾಕ್**‌ಗೆ ಸೈಕಲ್ ಸವಾರಿ ತುಂಬಾ ಇಷ್ಟ. ತನ್ನ ದಿನದ ಕೆಲಸ ಮಗಿದ ಮೇಲೆ ಕಾಡಿನೊಳಗೆ ಹೊಸ ಹೊಸ ಜಾಗಗಳನ್ನು ಕಂಡುಕೊಳ್ಳುವುದು ಅವನ ಹವ್ಯಾಸ. ಒಂದು ಹಿತವಾದ ಸುಂದರ ಸಾಯಂಕಾಲದ ಹೊತ್ತಿನಲ್ಲಿ ಸ್ವಲ್ಪ ದಟ್ಟವಾದ ಕಾಡಿನೊಳಗೆ ಹೋಗುವ ವಿಚಾರ ಬಂತು. ಶಾಂತವಾದ ಹೊಸ ಸುಂದರ ದೃಶ್ಯ, ಹಳ್ಳಗಳು, ಪಕ್ಷಿಗಳು, ಆಹ್ಲಾದಕರ ವಾತಾವರಣದಲ್ಲಿ ಕೆಲವು ಮೈಲಿಗಳು ಪಯಣ ಸುಖಕರವಾಗಿತ್ತು. ಈಗ ಸೂರ್ಯ ಅಸ್ತಮಿಸುತ್ತಿರುವ ಸಮಯದಲ್ಲಿ ತಾನು ಮುಖ್ಯ ರಸ್ತೆಗೆ ಹಿಂತಿರುಗುವುದೊಳ್ಳೆಯದೆಂದು ಜ್ಯಾಕ್ ಯೋಚಿಸಿದನು.

ವೇಗವಾಗಿಯೇ ಸೈಕಲ್ ತುಳಿಯುತ್ತಿದ್ದ ಜ್ಯಾಕ್ ರಸ್ತೆ ಗುರುತುಗಳಿಂದ ತಾನು ಸರಿಯಾದ ದಾರಿಯಲ್ಲಿದ್ದೇನೆಂದು ಖಚಿತಪಡಿಸಿಕೊಂಡನು. ಆಗ ಕತ್ತಲಾವರಿಸಿತು. ಮುಂದುವರಿಯುತ್ತಲೇ ತಾನು ಹಿಡಿದ ದಾರಿ ತಪ್ಪಿತೆನಿಸಿತು. ಒಂದು ದಾರಿ ಬಿಟ್ಟು ಇನ್ನೊಂದು ದಾರಿ, ಮತ್ತಿನ್ನೊಂದು ದಾರಿ, ಹಲವಾರು ಕಡೆ ಪ್ರಯತ್ನಿಸಿದರೂ ಹಿಂತಿರುಗುವ ದಾರಿ ಕಾಣಲಿಲ್ಲ. ಅವನು ಕಾಡಿನಲ್ಲಿ ದಾರಿತಪ್ಪಿದ್ದನು! ಅವನಿಗೀಗ ಬಹಳ ಭಯವಾಯಿತು. ಅವನಿಗೆ ತೋಚಿದುದೊಂದೇ ಉಪಾಯ... ಸಹಾಯಕ್ಕಾಗಿ ಕರೆ! ಸಾಧ್ಯವಿದ್ದಷ್ಟು ಸ್ವರವೇರಿಸಿ ಅವನು ಸಹಾಯಕ್ಕಾಗಿ ಕೂಗಿಕೊಂಡನು.

ಆ ಕಾಡಿನ ಕುರಿತು ಸರಿಯಾದ ಮಾಹಿತಿ ಇದ್ದ ಇನ್ನೊಬ್ಬ ಸೈಕಲ್ ಸವಾರ ರೋಬಿನ್ ಸುದೈವವಶಾತ್ ಆಗ ತಾನೇ ಹಿಂತಿರುಗುತ್ತಿದ್ದನು. ಎಲ್ಲಾ ರಸ್ತೆಗಳ ಪರಿಚಯವಿದ್ದ ಆತನು ಯಾವ ದಾರಿ ಹಿಡಿಯಲಿ ಎಂದು ಯೋಚಿಸುತ್ತಾ ಕೂಡು ದಾರಿಯಲ್ಲಿ ಒಂದು ಕ್ಷಣ ತಡೆದು ನಿಂತಾಗ... ಯಾರದೋ ಕರೆ ಕೇಳಿಸಿದಂತಾಯಿತು. ಆ ಮೌನವನ್ನು ಬೇಧಿಸಿ ದೂರದಿಂದ ಒಂದು ಶಬ್ದ... ಅದೊಂದು ಸಹಾಯ ಯಾಚನೆಯ ಕರೆಯೆ? ಮತ್ತೊಂದು ಬಾರಿ ಸ್ಪಷ್ಟಪಡಿಸಿಕೊಂಡ ರೋಬಿನ್, ಸೈಕಲೇರಿ ಬಹಳ ವೇಗವಾಗಿ ಆ ಕಡೆಗೆ ಪಯಣಿಸಿದನು. ಒಂದು ತಿರುವು ದಾಟಿದಾಗ ಬೆಳಕಿಗೆದುರಾಗಿ ಕಳೆದುಹೋದ ಮನುಷ್ಯನು ನಿಂತಿರುವುದನ್ನು ಕಂಡನು. ಜ್ಯಾಕ್ ಆ ಬೆಳಕನ್ನು ಕಂಡವನೇ ಕೂಗಿಕೊಂಡನು – "ನಾನು ಇಲ್ಲಿಂದ ಹೇಗೆ ಹೊರಗೆ ಹೋಗಲಿ? .... ನಾನು ದಾರಿ ತಪ್ಪಿದ್ದೇನೆ". ಅಷ್ಟೇ ಅಲ್ಲ, ಜ್ಯಾಕ್ ಹಸಿವಿನಿಂದ, ಭಯದಿಂದ, ತಂಪಿನಿಂದ ಕಂಗಾಲಾಗಿ ನಡುಗುತ್ತಿದ್ದನು.

ರೋಬಿನ್ ಅವನ ಬಳಿಸಾರಿ, ತಾನು ಅವನನ್ನು ಹೊರಗೆ ಕರೆದೊಯ್ಯಬಲ್ಲೆನೆಂದು ಭರವಸೆ ಇತ್ತನು. ತನ್ನ ಬೆನ್ನ ಮೇಲಿದ್ದ ಚೀಲವನ್ನು ಇಳಿಸಿ ತಿನ್ನಲು, ಕುಡಿಯಲು ಆಹಾರವನ್ನು ಕೊಟ್ಟನು. ಜ್ಯಾಕ್ ಶಾಂತನಾದ ಮೇಲೆ, ಮುಂದಿನಿಂದ ತಾನು ಸವಾರಿ ಮಾಡುತ್ತಾ – "ನೀನು ನನ್ನನ್ನು ಹಿಂಬಾಲಿಸು" – ಎಂದು ಹೇಳಿ ಮುಂದೆ ಸಾಗಿದನು.

ತಾನು ಸುಭದ್ರ ಹಸ್ತಗಳಲ್ಲಿದ್ದೇನೆಂದು ತಿಳಿದ ಜ್ಯಾಕ್‌ನ ಮನಸ್ಸಿನಲ್ಲಿದ್ದ ಕೃತಜ್ಞತೆಯನ್ನು ನಾವು ಊಹಿಸಬಲ್ಲೆವು. ಈ ಹೊಸ ಸ್ನೇಹಿತನನ್ನು ಕಳೆದುಕೊಳ್ಳಲು ಅವನು ಸಿದ್ಧನಿರಲಿಲ್ಲ. "ನೀನು ದಾರಿಯನ್ನು ಬಲ್ಲೆ. ಇನ್ನು ಮುಂದೆ ಕಾಡಿನೊಳಕ್ಕೆ ಹೋಗುವಾಗ ನಾನು ನಿನ್ನ ಸಂಗಡ ಬರಲಿಚ್ಛಿಸುತ್ತೇನೆ. ನಿನ್ನೊಂದಿಗೆ ಸದಾ ಸಂಪರ್ಕದಲ್ಲಿರಲು ನಾನು ಆಶಿಸುತ್ತೇನೆ" – ಎಂದನು.

ನಮ್ಮ ಜೀವನದಲ್ಲಿ ನಾವು ಕೂಡಾ ದಾರಿತಪ್ಪುತ್ತೇವೆ. ಪ್ರಭು ಯೇಸುವಿಗೆ ನಾವು ಯಾವ ದಾರಿ ಹಿಡಯಬೇಕೆಂದು ತಿಳಿದಿದೆ. ಆತನೆನ್ನುತ್ತಾನೆ– *"ನನ್ನ ಹಿಂದೆ ಬಾ".* ಆತನೆನ್ನುತ್ತಾನೆ *"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು"* (ಯೋಹಾನ 8:12).

ಜ್ಯಾಕ್ ತನ್ನ ಮನೆ ಸೇರಲು ಉದ್ವಿಗ್ನನಾಗಿದ್ದಂತೆ, ಪರಲೋಕದ ನಮ್ಮ ಶಾಶ್ವತ ಮನೆಯನ್ನು ಸೇರಲು ನಾವು ನಿರೀಕ್ಷೆಯಿಂದ ಇದ್ದೇವೆ. ದಾರಿ ತಿಳಿಯಲು ಆತನನ್ನು ಹಿಂಬಾಲಿಸಬೇಕು. ಆತನು ಹೇಳಿದ್ದು – *"ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಹೊರತು ಯಾರೂ ತಂದೆಯ ಬಳಿಗೆ ಬರಲಾರರು"* (ಯೋಹಾನ 14:6).

*"ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು, ಕಟ್ಟಕಡೆಗೆ ಅದು ಮರಣ ಮಾರ್ಗವೇ"* (ಜ್ಞಾನೋಕ್ತಿ 16:25).

ನಾವು ದಾರಿತಪ್ಪಿ ಕಳೆದುಹೋಗುವ ಮೊದಲೇ ಆತನನ್ನು ಕರೆಯುವುದು ಬುದ್ಧಿವಂತಿಕೆಯಲ್ಲವೇ? .... ಆಯ್ಕೆ ನಮ್ಮದು.